DAC-504
1-P-2

Reg no KK.NN 12 ಶಿ - For Influential Publicity - 8-10-76

ಸ್ವರ್ಣ ಮಹೋತ್ಸವ ನೆರವೇರಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿ

ಸತ್ಯವಾದಿ
SATYAVADI

60 th Diamond Jubilee Year
ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 15 ಪೈಸೆ

ಇಂಗ್ಲೆಂಡ್ ಬ್ಯಾಂಕ್‌ನ ದರ

ಲಂಡನ್ — ಬ್ಯಾಂಕ್ ಆಫ್ ಇಂಗ್ಲೆಂಡ್ ತನ್ನ ಕನಿಷ್ಠ ಸಾಲ ನೀಡುವ ಸಾಲಕ್ಕೆ ಸೇಕಡ 15 ಕ್ಕೆ ಹೆಚ್ಚಿಸಿದೆ

★

ಸೇನೆ ಕತೋಟಿಯಲ್ಲಿ ತಾಯ್ಲಾಂಡು

ಬ್ಯಾಂಗ್‌ಕಾಕ್ — 3 ವರ್ಷಗಳ ಸಿವಿಲ್ ಅಡಳಿತದ ನಂತರ ತಾಯ್ಲಾಂಡು ಈಗ ಸೇನೆ ಹತೋಟಿಯಲ್ಲಿದೆ.

●

ಈ ದಿನ ಪ್ರಧಾನಿಯವರ ಪ್ರಯಾಣ

ನವ ದೆಹಲಿ — ಪ್ರಧಾನಿ ಇಂದಿರಾರವರು ಮಾರಿಷಸ್, ತಾಂಜಾನಿಯ ಮತ್ತು ಜಾಂಬಿಯಾ ಭೇಟಿಗಾಗಿ ಈ ದಿನ ಪ್ರಯಾಣ

★

ಪಿಲ್ಲೂ ಮೋದಿ ಹಾಗೂ ಪಾಟ್ನಾಯಕರ ಬಿಡುಗಡೆ

ನವ ದೆಹಲಿ — ಪಿಲ್ಲೂ ಮೋದಿ ಮತ್ತು ಬಿಜು ಪಾಟ್ನಾಯಿಕ್ ಬಂಧನದಿಂದ ಬಿಡುಗಡೆ ಮಾಡಲ್ಪಟ್ಟಿರುವುದಾಗಿ ಅಧಿಕೃತವಾಗಿ ಗೊತ್ತಾಗಿದೆ. ಶ್ರೀ ಮೋದಿಯವರು ವಿದೇಶಿ ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತಾ, ತಾವು ಆರೋಗ್ಯದಿಂದ ಇರುವುದಾಗಿ, ಜೇಲಿನಲ್ಲಿ ಚೆನ್ನಾಗಿ ನೋಡಿಕೊಳ್ಳಲಾಯಿತೆಂದು ತಿಳಿಸಿದರು.

○

ಅಧ್ಯಕ್ಷ ಅನ್ವರ್‌ರವರ ಸೂಚನೆ

ಕೈರೋ — ರಾಜಕೀಯ ಪ್ರಯತ್ನಗಳಿಂದ ನ್ಯಾಯಯುತವಾದ ಶಾಂತಿ ದೊರೆಯದಿದ್ದರೆ ಮುಂದೆ ಪೂರ್ವದ ಏನಾದ್ರಿ ಪರಿಹಾರಕ್ಕೆ ಈಜಿಪ್ಟ್ ಸೇನೆ ಪರಿಹಾರಕ್ಕೆ ಕೈ ಹಾಕುವುದೆಂದು ಅಧ್ಯಕ್ಷ ಅನ್ವರ್ ಪಾದತ್ ಪಶ್ಚಿಮ ಪಡೆಗಳ ಅಧಿಕಾರಿಗಳನ್ನು ಕುರಿತು ಮಾಡಿದ ಭಾಷಣದಲ್ಲಿ ತಿಳಿಸಿದರು

●

ವಾರ್ತಾ ಮಂತ್ರಿಯವರ ಆಶ್ವಾಸನೆ

ಮಂಗಳೂರು — ಸರ್ಕಾರಿ ಇಲಾಖೆಯ ಪತ್ರಿಕೋದ್ಯೋಗಿಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸಲು ಸರ್ಕಾರ ಹಿತಾಸಕ್ತಿ ಹೊಂದಿದೆ ಎಂದು ಈ ಸಂಬಂಧದ ಪತ್ರವ್ಯವಹಾರ ಉದ್ಘಾಟಿಸುತ್ತಾ ವಾರ್ತಾ ಮಂತ್ರಿ ಶ್ರೀ ಸುಬ್ಬಯ್ಯ ಶೆಟ್ಟಿಯವರು ತಿಳಿಸಿದರು.

★

ಮೂವರ ಜಲಸಮಾಧಿ ದೋಣಿ ಮುಳುಗಿ

ಬೆಂಗಳೂರು — ತಿರುನಂಕೂಡಲು ನಂಜನಗೂಡಿನ ತಾಲ್ಲೂಕಿನ ಕಾವೇರಿ ಪಟ್ಟಣದ ಹತ್ತಿರ ಒಂದು ದೋಣಿ ಮುಳುಗಿ ಮೂವರು ನೀರು ಪಾಲಾದರು.

ಚಿನ್ನದ ಆಭರಣಗಳ ವಶ

ಅಹಮದಾಬಾದು — ಒಬ್ಬ ಶ್ರೀಮಂತ ವ್ಯಾಪಾರಿಯ ಗಣ್ಯರ ಮನೆಯ ಮೇಲೆ ನಡೆಸಿದ ದಾಳಿಯಲ್ಲಿ ಆದಾಯ ತೆರಿಗೆ ಅಧಿಕಾರಿಗಳು 74 ಲಕ್ಷ ರೂಪಾಯಿಗಳ ಬೆಲೆ ಬಾಳು ಚಿನ್ನಾಭರಣ ನಗನಾಣ್ಯಗಳನ್ನು ವಶಪಡಿಸಿಕೊಂಡರು

●

ಕತ್ತಿಗಳ ಮೆರವಣಿಗೆ

ಗುಡಿಬಂಡೆ — ಮಳೆಯ ದೇವರ ಕೃಪೆಗಾಗಿ ನರ್ಲಕೊಂಡ ಗ್ರಾಮದ ಬೀದಿಗಳಲ್ಲಿ 15 ಅಲಂಕೃತ ಕತ್ತಿಗಳ ಮೆರವಣಿಗೆ ನಡೆಸಲಾಯಿತು.

●

ಪೋಲೀಸರಿಗೆ ಹಿತವಚನ

ಬೆಂಗಳೂರು — ಓರ್ವ ಗೊತ್ತಿಲ್ಲದ ಪೋಲೀಸಿನವನ ಸ್ವಾಭಾವಿಕ ಅನಾವರಣ ಮಾಡುತ್ತಾ, ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು ಮಾತನಾಡಿ, ರಾಜ್ಯದ ಪೋಲೀಸು ಪಡೆ ತುಂಬಾ ತ್ಯಾಗ ಮಾಡಲು ಸಿದ್ಧವಾಗಿರುವಂತೆ ಕರೆಯನ್ನು ನೀಡಿದರು ಹಣ ಮಾಡಿಕೊಳ್ಳುವ ಉದ್ದೇಶದಿಂದ ಯಾರೂ ಈ ಕೆಲಸಕ್ಕೆ ಸೇರಬಾರದೆಂದರು

★

ದೇವರ ಆಜ್ಞೆಯಂತೆ ತನ್ನ ಕೈ ಕತ್ತರಿಸಿದ

ಕನಕ್ಟಿಕಟ್— ಸ್ಪ್ರಿಂಗ್‌ಫೀಲ್ಡಿನ ಬೈಬಲ್ ಭಕ್ತನೊಬ್ಬ 18 ವರ್ಷದ ಹುಡುಗಿಯೊಬ್ಬಳ ಕೈಲಿ ಬೈಬಲ್ ಹಿಡಿದುಕೊಂಡು ರಕ್ತ ಸುರಿಯುತ್ತಿದ್ದ ಗಾಯದೊಡನೆ ರಸ್ತೆಯಲ್ಲಿ ಹೋಗುತ್ತಿದ್ದಾಗ, ವಿಚಾರಿಸಲು, ದೇವರ ಆಜ್ಞೆಯಂತೆ ತನ್ನ ಬಲಗೈಯನ್ನು ರೇಜರ್ ಬ್ಲೇಡಿನಿಂದ ಕತ್ತರಿಸಿದುದಾಗಿ ಹೇಳಿದನು.

○

ದೇಶಕ್ಕೆ ಭಾರಿ ಪ್ರಮಾಣದಲ್ಲಿ ಚಿನ್ನ ಕಳ್ಳಸಾಗಾಣಿಕೆ- ಮಾಡುತ್ತಿದ್ದ ಸ್ಪೈನ್ ಮೂಲ ಪೂನಾಜಿ ಷಾ ಬಂಧನದಲ್ಲಿದ್ದಾನೆ.

ದಸರಾ ವಸ್ತುಪ್ರದರ್ಶನ

10 ನೇ ತಾ. ಸಂಜೆ 5-30 ಗಂಟೆಗೆ ಆಯರ ಹಳ್ಳಿಯವರಿಂದ ವೀರಮಕ್ಕಳ ಕುಣಿತ 6 ರಿಂದ ಶ್ರೀಮತಿ ಎಂ ಎ ಗಿರಿಜಮ್ಮನವರಿಂದ ಹಾಡುಗಾರಿಕೆ 7 ಗಂಟೆಗೆ ವಾರ್ತಾ ಮಂತ್ರಿಯವರ ಅಧ್ಯಕ್ಷತೆಯಲ್ಲಿ ತಮಿಳು ನಾಡಿನ ಕಲಾವಿದರಿಂದ ಭರತನಾಟ್ಯ ಮತ್ತು ಕರಗ ನೃತ್ಯ

★

ಪೋಲೀಸು ಪ್ರಕಟಣೆ

ಮೈಸೂರು — ನಾರದ ಪತ್ರಿಕಾ ಹೇಳಿಕೆಯಲ್ಲಿ ಪೋಲೀಸು ಕೂಪರಿಗೆಂಟೆಂಡೆಂಟರು, 96 ಆಟೋ ರಿಕ್ಷಾ ಡ್ರೈವರು ಮತ್ತು ಮೂಲೀಕರು ವಿವಿಧ ತಕ್ಸೀರುಗಳಿಗಾಗಿ ಪ್ರಾಸಿಕ್ಯೂಟ್ ಆದರು.

★

ಮಳೆ ಇಲ್ಲದ್ದಕ್ಕೆ ಕಾರಣ !

ಧಾರವಾಡ— ಅಂಬ್ಲಿ ಕೊಪ್ಪದಲ್ಲಾದ ಅನಾವೃಷ್ಟಿ ಮತ್ತು ಮಳೆಬಂದ ಸ್ವಾರಸ್ಯಕರ ಪ್ರಕರಣವಿದು – ಅಲ್ಲಿ ಹತ್ತು ತಿಂಗಳುಗಳಿಂದ ಮಳೆ ಇಲ್ಲದೆ ಭಕ್ತರ ಬೆಳೆ ಕೆಡುತ್ತಿತ್ತು – ಮಳೆಯು ಕುರುಹೇ ಕಾಣಬರಲಿಲ್ಲ – ಅಲ್ಲಿಯ ಒಬ್ಬ ರೈತನ ತಲೆಗೆ. ಹಳೆ ನಂಬಿಕೆಯಾದ, ತೊನ್ನು ಕ್ರೋಗಿಗಳ ಶವ ಹೂತಿದ್ದರೆ, ಮಳೆ ಬರುವುದಿಲ್ಲ ವೆಂಬಾದು ಹೊಳೆಯಿತು – ವಿಚಾರಿಸಿದಲ್ಲಿ ಕೆಲ ತಿಂಗಳ ಹಿಂದೆ ಕತ್ತು ಹೋದ ಮತ್ತು ಕೂಳ್ಳಟ್ಟ ಒಬ್ಬ ಮುಸ್ಲಿಂ ಹುಡುಗಿಗೆ ತೊನ್ನು ಇದ್ದಿತೆಂದು ಗೊತ್ತಾಯಿತು – ಗ್ರಾಮಸ್ಥ ಹುಡುಗಿಯ ತಂದೆಯನ್ನು ಒಡಂಬಡಿಸಿ, ಶವವನ್ನು ಹೊರಕ್ಕೆ ತೆಗೆಸಿ ಸುಡಿಸಿದರು – ನಂತರ ಒಂದು ಗಂಟೆಯೊಳಗೆ ಮಳೆ ಬಂದಿತು.

○

ಕೆಲಸದಿಂದ ವಜಾ

ಬೆಂಗಳೂರು — ಲಂಚ ಸ್ವೀಕರಿಸಿದ ಲಿಂಗಸೂರಿನ ಸಬ್ ರಿಜಿಸ್ಟ್ರಾರ್ ಶ್ರೀ ಮೀರ್ ಅಬೀದ್ ಅಲ್ಲಿ ಮತ್ತು ತೂಕ ಅಳತೆಯ ಹಿರಿಯ ಇನ್‌ಸ್ಪೆಕ್ಟರ್ ಶ್ರೀ ಟಿ.ಎಂ ಚಂದ್ರಯ್ಯ ಕೆಲಸದಿಂದ ವಜಾವಾದರು.

ರಹದಾರಿ ಕೊಡಲು ನಿರ್ಧಾರ

ಬೆಂಗಳೂರು — ಹತ್ತೊಂಬತ್ತು ರಾಜ್ಯಗಳ ಸಾರಿಗೆ ಮಂತ್ರಿಗಳ 4 ನೇ ಸಮ್ಮೇಳನದಲ್ಲಿ ಸಾಮಾನು ಸಾಗಿಸುವ ವಾಹನಗಳಿಗೆ ಹೆಚ್ಚಿಚ್ಚು ರಹದಾರಿ ಕೊಡಲು ನಿರ್ಧರಿಸಲಾಯಿತು.

○

ಹಂಗಾಮಿ ಒಪ್ಪಂದ

ವಾಷಿಂಗ್ಟನ್ — ಫೋರ್ಡ್ ಮೋಟಾರು ಕಂಪೆನಿಯಲ್ಲಿ ಕಾರ್ಮಿಕರಿಗೆ 4 ದಿನಗಳ ವಾರದ ಹಂಗಾಮಿ ಒಪ್ಪಂದವಾಗಿದೆ.

ಗೋರಕ್ಷಣ'ಕ್ಕೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯೆ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ಸೇವೆಯಲ್ಲಿರುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣ' ಬೆಳ್ಳಿ ಹಬ್ಬ ನುಕ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂದು ವಿಶ್ವಾಸ ಹೊಂದಿದ್ದೇವೆ

SHAKTI
SUDHA

A Superb Tonic

MYSORE RACES 1976

SATURDAY 9th October

SUNDAY 10th October

[The Mysore Derby and
The Bangalore Turf Club Gold Cup]

ಮೈಸೂರು ದಸರಾ ಕೈಗಾರಿಕಾ ಮತ್ತು ಸಾಂಸ್ಕೃತಿಕ ವಸ್ತು ಪ್ರದರ್ಶನ, ದೊಡ್ಡಕೆರೆ ಮೈದಾನ ವಸ್ತು ಪ್ರದರ್ಶನದ ನೂತನ ಕಲಾಮಂಟಪದಲ್ಲಿ

ವಿಶೇಷ ಕಾರ್ಯಕ್ರಮ.

9-10-76 ರ ಶನಿವಾರ ಸಂಜೆ 7 ಘಂಟೆಗೆ

ಮದರಾಸಿನ ಸುಪ್ರಸಿದ್ಧ ಕಲಾವಿದರಾದ

ಶ್ರೀ ರಮಣಿ ಮತ್ತು ಪಾರ್ಟಿ

ಅವರಿಂದ ಶಾಸ್ತ್ರೀಯ ಸಂಗೀತ ತಮ್ಮೆಲ್ಲರಿಗೂ ಆದರದ ಸ್ವಾಗತ

ಡಿ ಜಯದೇವರಾಜ ಅರಸು, ಬಿ. ಪಿ ಲಿಂಗಯ್ಯ

ಪ್ರಧಾನ ಕಾರ್ಯದರ್ಶಿಗಳು

ವುಡ್‌ಲಾಂಡ್ಸ್ 8 10 76 ರಿಂದ

ಅವೋಘ ಆರಂಭ

ಪ್ರೇಮದ ಕಾಣಿಕೆ

ಕನ್ನಡ ಕಲರ್

ಡಾ. ರಾಜಕುಮಾರ್ ಅರತಿ ಜಯಮಾಲ ಅಭಿನಯ

ದಿನ 3 ಪ್ರದರ್ಶನಗಳು

ಅಪೂರ್ವ 8 10 76 ರಿಂದ

ಉನರ್ಚಿಗಳ್ A

ಕಮಲ ಹಾಸನ್ ಅಭಿನಯ

ತಮಿಳು ಪ್ರತಿ ದಿನ 3 ಪ್ರದರ್ಶನಗಳು

Edited Printed and Published by Dharmaprachaaranirata M S. Krishna Rao (Proprietor) at the Satyavadi Press, Chamarajapuram Mysore 4